# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

## 8 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆ

**ಸಮಯ : 1.30 ಗಂಟೆಗಳು** **ಗರಿಷ್ಠ ಅಂಕಗಳು : 40**

**ಕೊಟ್ಟಿರುವ ಪ್ರತಿಪ್ರಶ್ನೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿಯುತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **4 * 1 = 4**

1. ಕನ್ನಡ ವರ್ಣಮಾಲೆಯಲ್ಲಿರುವ ದೀರ್ಘಸ್ವರಗಳ ಸಂಖ್ಯೆ;
   (ಅ) 06 (ಆ) 07 (ಇ) 10
   (ಈ) 13
2. ಇವುಗಳಲ್ಲಿ ಸಜಾತೀಯ ಸಂಯುಕ್ತಾಕ್ಷರಕ್ಕೆ ಉದಾಹರಣೆಯಾದ ಪದ ಇದು;
   (ಅ) ಅಮ್ಮ (ಆ) ಚಂದ್ರ (ಇ) ಅತ್ಮ (ಈ) ಸೂರ್ಯ
3. 'ಮನೆಯ' ಪದದಲ್ಲಿ ಇರುವ ವಿಭಕ್ತಿಯ ಹೆಸರು;
   (ಅ) ಚತುರ್ಥಿ (ಆ) ಪಂಚಮಿ (ಇ) ಷಷ್ಠಿ (ಈ) ಸಪ್ತಮಿ
4. 'ವಸಂತನಾಗಮನ' ಪದದಲ್ಲಿ ಆಗಿರುವ ಸಂಧಿ.
   (ಅ) ಲೋಪ (ಆ) ಆಗಮ (ಇ) ಆದೇಶ (ಈ) ಜಶ್ತ್ವ

**ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ.** **4 * 1 = 4**

5. ಸದ್ಗುಣ : ದುರ್ಗುಣ : : ಕೃತಕತೆ : ____________________
6. ಪ್ರಾಣ : ಹರಣ : : ಲೋಕ : _______________
7. ಉರಗ : ಹಾವು : : ಖಗ : ____________
8. ದೊಡ್ಡದು : ದೇಶೀಯಪದ : : ವಾಟರ್ : ______________

**ಕೊಟ್ಟಿರುವ ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.** **7 * 1 = 7**

9. ರಹೀಮನು ಮಗ್ಗವನ್ನು ಮುಟ್ಟದೆ ಎಷ್ಟು ವರ್ಷಗಳಾಗಿತ್ತು?
10. ಮನೆಗೆ ಬಂದವರನ್ನು ಹೇಗೆ ಸತ್ಕರಿಸುವ ಸಂಪ್ರದಾಯ ನಮ್ಮಲ್ಲಿದೆ?
11. 'ರಾಯ', 'ಅಣ್ಣ' ಎಂದು ಯಾರನ್ನು ಕರೆಯುತ್ತಿದ್ದರು?
12. ರಾಷ್ಟ್ರಕವಿ ಗೋವಿಂದ ಪೈ ಅವರ ಪ್ರಕಾರ ನಮ್ಮನ್ನು ಆಳುವವಳು ಯಾರು?
13. ನಿದ್ದೆ ಎಚ್ಚರಗಳಲ್ಲಿ ಯಾವ ಕೈ ದುಡಿಯುತಿದೆ?
14. ಕವಿ ಚೆನ್ನವೀರ ಕಣವಿ ಅವರ ಕಾಲ ಮತ್ತು ಸ್ಥಳ ತಿಳಿಸಿ.
15. ಕೋಗಿಲೆ ಕುಕಿಲರಾಗವನ್ನು ಯಾವಾಗ ಬೆರೆಸಿತು?

**ಕೊಟ್ಟಿರುವ ಪ್ರತಿಪ್ರಶ್ನೆಗೂ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.** **5 * 2 = 10**

16. ಲೇಖಕಿ ನೇಮಿಚಂದ್ರ ಅವರ ಪ್ರಕಾರ ನಾಗರಿಕತೆಯ ದೊಡ್ಡ ಅನಾಹುತಗಳಾಗಿ ಕಾಣಿಸಿಕೊಳ್ಳುತ್ತಿರುವ ಆಚರಣೆಗಳಾವುವು?
17. ಶಿವನಸಮುದ್ರದಲ್ಲಿ ಸುಬ್ರಹ್ಮಣ್ಯಮ್ ಮಾಡಿದ ವ್ಯವಸ್ಥೆಗಳಾವುವು?
18. ಕವಿ ಗೋವಿಂದ ಪೈ ಅವರ ಪ್ರಕಾರ ಕನ್ನಡದ ಕವಿಶ್ರೇಷ್ಠರ ಹಿರಿಮೆಯೇನು?
19. ಹೊಸ ನಾಡೊಂದನ್ನು ಕಟ್ಟ ಬಯಸುವ ಕವಿ ಉತ್ಸಾಹ ಉದ್ವೇಗದಲ್ಲಿ ಹೇಳುವ ಮಾತುಗಳಾವುವು?
20. ಕವಿ ದಿನಕರ ದೇಸಾಯಿ ಅವರ ಪ್ರಕಾರ ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಬದುಕು ಧನ್ಯವಾಗುವುದು ಹೇಗೆ? ವಿವರಿಸಿ.

**ಕೊಟ್ಟಿರುವ ಪ್ರತಿಹೇಳಿಕೆಯನ್ನೂ ಸಂದರ್ಭದೊಡನೆ ವಿವರಿಸಿರಿ.** **2 * 2 = 4**

21. "ದೇವರು ದೊಡ್ಡವನು; ದೇವರು ದಯಾಳು"
22. "ತಾರೆ ಬಂದಿವೆ ಬಾನ ಬೀದಿಗೆ"

**ಕೊಟ್ಟಿರುವ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.** **1 * 2 = 2**

23. ಪ್ರಕೃತಿಯ ಸಿರಿಮುಡಿಗೆ ಕೊಡಲಿ ಹಾಕಿದ ಮನುಜ
ಸ್ವಾರ್ಥದಲಿ ಮುಳುಗಿಹನು ಪೂರ
ಭಿತ್ತಿಯಲಿ ಬಿಡಿಸುವನು ಗಿಡಬಳ್ಳಿ ಚಿತ್ತಾರ
ಮರೆತೇಬಿಟ್ಟಿಹನು ಮಣ್ಣ ಸೊಗಡ ॥

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1 * 2 = 2**

24. ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು
____________________________
____________________________
____________________________
____________________________
ಉಂಡವನು ಕಂಡಿಹನು ಇದರ ಹದನು.

**ಕೊಟ್ಟಿರುವ ಪ್ರಶ್ನೆಗಳಲ್ಲಿ ಯಾವುದಾದರೂ <u>ಒಂದಕ್ಕೆ</u> ಸುಮಾರು ಆರು/ಏಳು ವಾಕ್ಯಗಳಲ್ಲಿ ಉತ್ತರಿಸಿರಿ.** **1 * 3 = 3**

25. * ಡಿವಿಜಿ ಅವರ ವ್ಯಕ್ತಿತ್ವವನ್ನು ಸಂಗ್ರಹಿಸಿ ಬರೆಯಿರಿ.
 * ಡಿವಿಜಿ ಅವರಿಗೂ ಅವರ ಶ್ರೀಮತಿ ಅವರಿಗೂ ನಡೆದ ಸಂಭಾಷಣೆಯನ್ನು ಬರೆಯಿರಿ.

**26. ನಿಮ್ಮ ಊರಿನಲ್ಲಿ ನಡೆಯುವ ಜಾತ್ರೆಗೆ ಆಗಮಿಸುವಂತೆ ತಿಳಿಸಿ, ಗೆಳೆಯನಿಗೆ ಪತ್ರ ಬರೆಯಿರಿ.** **1 * 4 = 4**

**ಅಥವಾ**

**ಕೊಟ್ಟಿರುವ ವಿಷಯವನ್ನು ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.**

* ಶಾಲಾ ಸ್ವಚ್ಛತೆಯನ್ನು ಕಾಪಾಡುವಲ್ಲಿ ವಿದ್ಯಾರ್ಥಿಗಳ ಪಾತ್ರ.